ಪಡೆಯಬೇಕಿತ್ತು."

"ನೀನು ನನ್ನೊಡನೆ ಮಾತನಾಡಬೇಕು, ಬರುತ್ತೇನೆ ಎಂದಾಗ ನಾನು ಏನೇನೋ ಕನಸುಕಂಡೆ. ಬದುಕು ನಮ್ಮಿಬ್ಬರಿಗೂ ಪಾಠ ಕಲಿಸಿದೆ. ಇಬ್ಬರಲ್ಲೂ ಇದ್ದ ಅಹಃ ಇಳಿದು ಹೋಗಿದೆ. ಇನ್ನುಮುಂದೆ ನಾವು ಹೊಸದಾಗಿ ಸಂಸಾರ ಮಾಡುತ್ತೇವೆ, ನಮ್ಮ ಪ್ರೀತಿಗೆ ಮೋಸವಾಗಿಲ್ಲ, ಗಂಡ, ಮಗಳು, ಮನೆ ಎಂದು ಸಂತೋಷದಿಂದ ಇರಬಹುದು ಎಂದುಕೊಂಡಿದ್ದೆ. ನಾನು ಬದಲಾಗಿದ್ದೆ; ನೀನು ಮಾತ್ರ ಬದಲಾಗಲೇ ಇಲ್ಲ ಶಶಿಧರ."

ಅವನು ತಲೆ ಎತ್ತಲಿಲ್ಲ.

"ಅಷ್ಟಕ್ಕೂ ನನ್ನನ್ನು ಹುಡುಕಿಕೊಂಡು ಬರುವ ಅಗತ್ಯವೇನಿತ್ತು? ಹೇಗೂ ಸಂಪರ್ಕವೆ ಇಲ್ಲದೆ ಇದ್ದೆವಲ್ಲಾ. ಇದುವರೆಗೂ ನಾನಾಗಲೀ ನನ್ನ ಮಗಳಾಗಲೀ ನಿನಗೆ ಯಾವ ರೀತಿಯ ತೊಂದರೆಯನ್ನು ಕೊಟ್ಟಿಲ್ಲವಲ್ಲ. ವಿಚ್ಛೇದನದ ಅವಶ್ಯಕತೆ ಏನಿತ್ತು?"

ತಲೆ ತಗ್ಗಿಸಿ ಹೇಳಿದ ಶಶಿಧರ,

"ನಾನು ಮತ್ತೆ ಮದುವೆಯಾಗಬೇಕೆಂದರೆ ವಿಚ್ಛೇದನ ಬೇಕೆ ಬೇಕು ಸಂಜನಾ."

"ಮತ್ತೊಂದು ಮದುವೆ!?" ತಬ್ಬಿಬ್ಬಾಗಿ ಕೇಳಿದಳು.

"ಹೌದು. ನಮ್ಮ ಅಪ್ಪ ಅಮ್ಮನ ಆಸೆಯಂತೆ ನಮ್ಮ ಸಂಬಂಧದ ಹುಡುಗಿಯೊಂದಿಗೆ ಮದುವೆಯಾಗುತ್ತಿದ್ದೇನೆ."

ಉಸಿರು ಬಿಗಿಹಿಡಿದು ನಿಂತಿದ್ದ ಸಂಜನಾ ಕಣ್ಣುಮುಚ್ಚಿ ದೀರ್ಘವಾಗಿ ಉಸಿರೆಳೆದುಕೊಂಡಳು. ಕಣ್ತೆರೆದು ಕೈ ಚಾಚಿದಳು.

ಶಶಿಧರ ಅವಳಿಗೆ ಪತ್ರಗಳನ್ನು ನೀಡಿದ. ಪತ್ರಗಳಿಗೆ ಸಹಿ ಮಾಡಿ ಅವನ ಕೈಗೆ ವಾಪಸ್ಸು ಕೊಡುತ್ತಾ, "ಮುಗಿಯಿತಾ? ಇನ್ನೇನಾದರೂ ಇದೆಯಾ?" ಎಂದು ಕೇಳಿದಳು.

ಇಲ್ಲವೆನ್ನುವಂತೆ ತಲೆಯಾಡಿಸಿದ ಶಶಿಧರನ ಮುಖವನ್ನೇ ನೋಡಿದಳು. ಅವನ ಮುಖದ ಚಹರೆ ಬದಲಾಗಿತ್ತು. ಇದುವೆಗೂ ಒತ್ತಡದಿಂದ ಮುದುಡಿದಂತಿದ್ದ ಮುಖದಲ್ಲಿ ನಿರಾಳಭಾವ ತುಂಬಿಕೊಂಡಿತು. ದಿಗ್ವಿಜಯ ಸಾಧಿಸಿದವನಂತೆ ತುಟಿಯಲ್ಲಿ ತಿಳಿನಗೆ ತುಂಬಿಕೊಂಡ.

ಸಂಯಮದಿಂದ ಇರಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಅವನ ಮುಖದಲ್ಲಾದ ಬದಲಾವಣೆ ಅವಳಲ್ಲಿ ರೋಷ ಉಕ್ಕಿಸಿತು.

"ನೀನು ಬಂದ ಕೆಲಸ ಆಯಿತಲ್ಲಾ. ನೀನಿನ್ನು ಹೊರಡಬಹುದು" ಎಂದಳು ಕಠಿಣವಾಗಿ.

ಶಶಿಧರ ಏನೋ ಹೇಳಲು ಹೊರಟ. ಅದಕ್ಕೆ ಅವಕಾಶಕೊಡದೆ ಬಾಗಿಲಕಡೆ ಕೈ ತೋರಿಸುತ್ತಾ, "ದಯವಿಟ್ಟು ಹೊರಟುಹೋಗು" ಭಾಗಶಃ ಕಿರುಚಿದಳು.

ಏಕಾಏಕಿ ಸಂಜನಾಳ ಬದಲಾದ ನಿಲುವು ಕಂಡು ಕೊಂಚ ಗಾಬರಿಯಾದ ಶಶಿಧರ ಬ್ಯಾಗನ್ನು ಕೈಗೆತ್ತಿಕೊಂಡು ತಲೆಬಾಗಿಸಿಕೊಂಡು ಹೊರಟು ಹೋದ. ಕುರ್ಚಿಯ ಮೇಲೆ ಕುಸಿದು ಕುಳಿತ ಸಂಜನಾಳಿಗೆ ಅಳು ತಡೆಯಲಾಗಲಿಲ್ಲ. ಬಿಕ್ಕಿಬಿಕ್ಕಿ ಅತ್ತಳು. ಎಷ್ಟೋ ಹೊತ್ತಿನ ತನಕ ಅಳುತ್ತಲೇ ಇದ್ದ ಸಂಜನಾ ತನಗೆ ತಾನೇ ಸಮಾಧಾನ ಮಾಡಿಕೊಂಡಳು. ತಾಕಲಾಟಗಳ ಅರಿವೇ ಇಲ್ಲದೆ ಮುಗ್ಧನಿದ್ರೆಯಲ್ಲಿದ್ದ ಚಂದನಾಳ ಬಳಿ ಬಂದು ಮೆಲ್ಲಗೆ ಅವಳ ತಲೆ ಸವರಿದಳು.

"ಕ್ಷಮಿಸು ಪುಟ್ಟಾ, ನಿನ್ನ ತಲೆಯೊಳಗೆ ಏನೇನೋ ಆಸೆ ತುಂಬಿಸಿಬಿಟ್ಟಿದ್ದೆ. ಹೋಗಲಿ ಬಿಡು ಚಿನ್ನು. ನೀನೇನೂ ಹೆದರುವ ಅವಶ್ಯಕತೆಯಿಲ್ಲ. ಸೋಲಬೇಕಾಗಿಲ್ಲ, ನಾನಿದ್ದೇನೆ, ನಿನ್ನಮ್ಮ. ನಾವೂ ಬದುಕಿ ತೋರಿಸೋಣ."